**CW : 3**

PW : 3

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.450/2024

ಸಾಕ್ಷಿದಾರರ ಹೆಸರು : ಫಾತಿಮತ್ ತಸ್ಲಿಫಾ

ತಂದೆಯ ಹೆಸರು : ಕೈ ಮಹಮದ್ ಕುಞ

ಪ್ರಾಯ : 16 ವರ್ಷ

ಉದ್ಯೋಗ II ಪಿ ಯು ಸಿ , ವಿದ್ಯಾರ್ಥಿನಿ

ವಾಸಸ್ಥಳ :

ದಿನಾಂಕ:**03.02.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:

ಚಾಸಾ-1 ಮತ್ತು 2 ನನ್ನ ಅಣ್ಣಂದಿರು. ಚಾಸಾ-4 ನನ್ನ ತಂದೆ. ಚಾಸಾ-5 ನನ್ನ ತಾಯಿ. ಚಾಸಾ-6 ನನ್ನ ದೊಡ್ಡಪ್ಪನ ಮಗ. ಅವರ ಮನೆ ನಮ್ಮ ಮನೆಯ ಹತ್ತಿರ ಇರುತ್ತದೆ.

ದಿ. 6-1-2024 ರಂದು ರಾತ್ರಿ ಊಟ ಮಾಡಿ ನಮ್ಮ ಮನೆಯಲ್ಲಿ ಮಲಗಿದ್ದೆವು. ನಾನು ಮತ್ತು ನನ್ನ ತಂದೆ ಹಾಗೂ ತಾಯಿ ಕೋಣೆಯಲ್ಲಿ ಮಲಗಿದ್ದೆವು. ನನ್ನ ಅಣ್ಣಂದಿರು ಮನೆಯ ಹಾಲ್ ನಲ್ಲಿ ಮಲಗಿದ್ದರು. ದಿ.7-1-2024 ರಂದು ಮುಂಜಾನೆ 2.45 ರಲ್ಲಿ ಯಾರೋ ಬಂದು ಬಾಗಿಲನ್ನು ಬಡಿದರು. ಬಾಗಿಲನ್ನು ಬಡಿದ ಶಬ್ದ ಕೇಳಿ ನನ್ನ ತಂದೆ, ತಾಯಿ ಹಾಗೂ ನಾನು ಹಾಲ್ ಗೆ ಬಂದರು. ಆಗ ನನ್ನ ಅಣ್ಣ ಚಾಸಾ-1 ಬಾಗಿಲ ಹತ್ತಿರ ಹೋಗಿ ಕಿಟಕಿಯಲ್ಲಿ ಯಾರು ಎಂದು ಕೇಳಿದರು. ಆಚೆ ಇದ್ದವರು ನಮ್ಮ ಪರಿಚಯದ 1 ನೇ ಆರೋಪಿಯಾಗಿದ್ದು ಆತ ಬಾಗಿಲು ತೆಗೆಯಲು ಹೇಳಿದನು. ಆಗ ನನ್ನ ಅಣ್ಣ ನೀವು ಏಕೆ ಈಗ ಬಂದಿದ್ದೀರಿ, ನಾನು ಬಾಗಿಲು ತೆಗೆಯುವುದಿಲ್ಲ ಎಂದು ಹೇಳಿದನು. ಆಗ 1 ನೇ ಆರೋಪಿಯ ಜೊತೆ ಇದ್ದ ಒಂದು ಅಪರಿಚಿತ ಹೆಂಗಸು ಹಾಗುಾ ಆರೋಪಿ ಸಾಧಿಕ್ ಮಲೆಯಾಳಂ ಭಾಷೆಯಲ್ಲಿ ನಾಯಿಂಡೆ ಮೊನೆ ಬಾದಲ್ ಎಡಕ್ ಎಂದು ನಮ್ಮನ್ನು ಬೈದರು. ಅದೇ ಸಮಯದಲ್ಲಿ ಸಿದ್ದಿಕ್ ಹಾಲ್ ನಲ್ಲಿ ಮತ್ತು ಬೆಡ್ ರೂಮಿನಲ್ಲಿ ಇದ್ದ ಕಿಟಕಿಯ ಗಾಜನ್ನು ಕಬ್ಬಿಣದ ರಾಡ್ ನಲ್ಲಿ ಒಡೆದರು. ಸಾದಿಕ್, ಸಿದ್ದಿಕ್ ಮತ್ತು ಅಪರಿಚಿತ ಹೆಂಗಸು ನಮ್ಮ ಮನೆಯ ಬಾಗಿಲನ್ನು ಬಲವಾಗಿ ದೂಡಿ ಮನೆಯ ಒಳಗೆ ಅಕ್ರಮವಾಗಿ ಬಂದರು. ಸಿದ್ದಿಕ್ ಕಬ್ಬಿಣದ ರಾಡ್ ದಿಂದ ನನ್ನ ಅಣ್ಣ ಚಾಸಾ-2 ರವರ ಎಡಗಾಲಿನ ತೊಡೆಗೆ ಹೊಡೆದನು. ಆಗ ನಾನು ನನ್ನ ಅಣ್ಣಂದಿರಿಗೆ ಏಕೆ ಹೊಡೆದೆ ಎಂದು ಸಿದ್ದಿಕ್‌ನನ್ನು ಕೇಳಿದಾಗ ಆತ ನನ್ನ ಎಡಕೆನ್ನೆಗೆ ಕೈಯಿಂದ ಹೊಡೆದನು. ಅದೇ ಸಮಯದಲ್ಲಿ ಸಾದಿಕ್ ನನ್ನ ಅಣ್ಣ ಚಾಸಾ-1 ರವರ ಬೆನ್ನಿಗೆ ಕ್ಷಎಯಿಂದ ಹೊಡೆದು ದೂಡಿದನು. ಆಗ ಅಲ್ಲಿದ್ದ ಅಪರಿಚಿತ ಹೆಂಗಸು

ನನ್ನನ್ನು ಮತ್ತು ನನ್ನ ಅಣ್ಣ ಚಾಸಾ-1 ರವರನ್ನು ಉದ್ದೇಶಿಸಿ ಕಾರು ಮತ್ತು ಬೇರೆ ಏನಾದರೂ ವಿಚಾರಕ್ಕೆ ಫೋನ್ ಮಾಡಿದರೆ ನಿನ್ನನ್ನು ಜೀವಸಹಿತ ಬಿಡುವುದಿಲ್ಲ ಎಂದು ಹೇಳಿದರು. ಆಗ ನಾವೆಲ್ಲಾ ಬೊಬ್ಬೆ ಹಾಕಿದಾಗ

ಅಲ್ಲಿದ್ದವರೆಲ್ಲಾ ಗಡಿಬಿಡಿಯಲ್ಲಿ ಕಬ್ಬಿಣದ ರಾಡನ್ನು ಅಲ್ಲೇ ಬಿಸಾಡಿ ಅಲ್ಲಿಂದ ಓಡಿಹೋದರು. ಓಡಿಹೋದವರನು ಹಿಂಬಾಲಿಸಿ ನೋಡಿದಾಗ ಮನೆಯ ಹತ್ತಿರ ಇರುವ ರಸ್ತೆಯಲ್ಲಿ ಬಿಳಿಬಣ್ಣದ ಕಾರಿನಲ್ಲಿ ಹೊರಟುಹೋದರು. ಅಲ್ಲಿ ಚಾಸಾ-6 ರವರು ಇದ್ದರು , ಅವರಿಗೆ ನಡೆದ ವಿಚಾರವನ್ನು ತಿಳಿಸಿದ್ದೇವೆ. ನನ್ನ ಅಣ್ಣ ಚಾಸಾ-1 ರವರು ಅಫ್ರೀದ್ ಎನ್ನುವವರಿಂದ ಕಾರು ತೆಗೆದುಕೊಂಡಿದ್ದು ಅದನ್ನು ಆರೋಪಿ ಸಿದ್ದಿಕ್ ಗೆ ಬಾಡಿಗೆಗೆ ಕೊಟ್ಟಿದ್ದು ಸದರಿ ಕಾರನ್ನು ಹಿಂದಿರುಗಿಸಅಲು ಕೇಳಿದ್ದು ಆ ಕಾರಣಕ್ಕೆ ಆರೋಪಿತರು ಗಲಾಟೆ ಮಾಡಿರುತ್ತಾರೆ. ಮನೆಗೆ ಬಂದಿದ್ದ ಅಪರಿಚಿತ ಹೆಂಗಸಿನ ಹೆಸರು ನಂತರದಲ್ಲಿ ಗೊತ್ತಾಗಿದ್ದು ಅವರ ಹೆಸರು ಸಬೀನಾ ಎಂಬುದಾಗಿತ್ತು. ಈ ಬಗ್ಗೆ ಪೋಲೀಸರು .ನನ್ನನ್ನುವಿಚಾರಣೆ ಮಾಡಿರುತ್ತಾರೆ

ಸಿದ್ದಿಕ್ ನಗೆ ಹೊಡೆದ ಕಾರಣ ನನ್ನ ಎಡಕೆನ್ನೆ ಕೆಂಪಾಗಿತ್ತು. ಚಾಸಾ-2 ನನ್ನ ಅಣ್ಣನ ಕಾಲಿಗೆ ಗಾಯವಾಗಿತುತ ್. ಕಬ್ಬಿಣ ರಾಡ್ ಹಾಗೂ ಗ್ಲಾಸ್ ತುಂಡುಗಳನ್ನು ನೋಡಿದರೆ ಗುರುತಿಸುತ್ತೇನೆ ಹಲ್ಲೇ . ಆರೋಪಿತರು ಅಪರಾಧ ಕೃತ್ಯ ಎಸಗಲು ಉಪಯೋಗಿಸಿದ ಕಬ್ಬಿಣದ ರಾಡನ್ನು ನೋಡಿದರೆ ಗುರುತಿಸಬಲ್ಲೆ . ಅದೇ ರೀತಿ ನಮ್ಮ ಮನೆಯ ಲಕಿಲ ಕಬ್ಬಿಣದ ರಾಡ್ ನಿಂದ ಹೊಡದ ಕಾರಣ ಚೂರಾಗಿದ್ದ ಗಾಜಿನ ಚೂರುಗಳನ್ನು ನೋಡಿದರೆ ಗುರುತಿಸಬಲೆಲ. ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು ಮಾ–1 ಮತ್ತು 2 ಎಂದು ಗುರುತಿಸಲಾಗಿದೆ. ಆರೋಪಿತರು ಬಂದಿದ್ದ ಕಾರನ್ನು .ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ನಿಪಿ–3 ರಲ್ಲಿ ಕಾಣುವ ಕಾರನ್ನು ನೋಡಿ ಗುರುತಿಸಿರುತ್ತಾರೆ ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ಈ ದಿನ ನ್ಯಾಯಾಲಯಕ್ಷಕ ಹಾಜರಾಗಿರುವ 2 ಮತ್ತು 3 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃಆರೋಪಿತರ ಪರ ವಕೀಲರಿಂದಃ

ಮನೆಯ ರೂಮಿನಲ್ಲಿ ನಾನು ನನ್ನ ತಂದೆ ಹಾಗೂ ತಾಯಿ ಮಲಗಿದ್ದೆವು. ರೂಮಿನ ಬಾಗಿಲಿಗೆ ಚಿಲಕ ಹಾಕಲಾಗಿತ್ತು. ಗಲಾಟೆ ಆಗುವ ಪೂರ್ವ ಕಾರನ್ನು ಬಾಡಿಗೆಗೆ ಕೊಟ್ಟಿದ್ದು ಗೊತ್ತಿತ್ತು, ಅದನ್ನು ಬಿಟ್ಟು ಬೇರೆ ವಿಚಾರಗಳು ಗೊತ್ತಿಲ್ಲ. ನನ್ನ ಅಣ್ಣ ಚಾಸಾ-1 ರವರ ಮೇಲೆ ಸಬೀನಾರವರು ದೂರು

ಕೊಟ್ಟ ವಿಚಾರ ಹಾಗೂ ಆ ದೂರಿಗೆ ಸಂಬಂಧಿಸಿದಂತೆ ಪೊಲೀಸರು ನನ್ನ ಅಣ್ಣನನ್ನು ಹುಡುಕಿಕೊಂಡು ನಮ್ಮ ಮನೆಗೆ ಬಂದಿದ್ದ ವಿಚಾರ ನನಗೆ ಗೊತ್ತಿಲ್ಲ. ನನ್ನ ಪ್ರಕಾರ ಕಾರಿಗೆ ಸಂಬಂಧಿಸಿದ ವ್ಯವಹಾರ ನನ್ನ ಅಣ್ಣ ಚಾಸಾ-1 ಹಾಗೂ ಆರೋಪಿ ಸಿದ್ದಿಕ್ ಮದ್ಯೆ ಇತ್ತು. ಆರೋಪಿತರು ಮನೆಯ ಬಾಗಿಲನ್ನು ದೂಡಿ ಒಳಗೆ ಬಂದ ಕಾರಣ ಬಾಗಿಲಿಗೆ ಅಳವಡಿಸಿದ್ದ ಚಿಲಕಕ್ಕೆ ಹಾನಿಯಾಗಿತ್ತು. ಬಾಗಿಲಿನ ಚಿಲಕ ಹಾಕಲು ಆಗುತ್ತಿರಲಿಲ್ಲ. ಗಾಜಿನ ಚೂರುಗಳನ್ನು ಗಲಾಟೆ ಆಯಿತು ಎನ್ನುವ ದಿನವೇ ಗುಡಿಸಿ ಒಟ್ಟಾಗಿ ತೆಗೆದು ಬೇರೆ ಕಡೆ ಇಟ್ಟಿದ್ದೆವು. ಹಾನಿಯಾಗಿದ್ದ ಚಿಲಕವನ್ನು ಎಲ್ಲಿ ಇಟ್ಟಿದ್ದೆವು ಎಂದು ನೆನಪಿಲ್ಲ.

ಬಾತಿಷಾ ಎನ್ನುವವರು ಸ್ಥಳಕ್ಕೆ ಎಷ್ಟು ಗಂಟೆಗೆ ಬಂದರು ಎಂದು ನೆನಪಿಲ್ಲ. ನಾನು ರೂಮಿನಿಂದ ಎದ್ದು ಹೊರಗೆ ಬಂದು ನೋಡಿದಾಗ ಆರೋಪಿತರು ಮನೆಯ ಅಂಗಳದಲ್ಲಿ ಇದ್ದರು. ನನ್ನ ಅಣ್ಣಂದಿರು ಮನೆಯ ಹಾಲ್ನಲ್ಲಿ ಇದ್ದರು. ನಾನು ಬಂದು ನೋಡಿದಾಗಲೇ ಆರೋಪಿತರು ಕಿಟಕಿ ಗಾಜು ಹಾಗೂ ಬಾಗಿಲ ಚಿಲಕ ಹಾನಿ ಮಾಡಿದರು.

ಗಲಾಟೆ ಸಂಬಂದಿತವಾಗಿ ನಾನು ಪೊಲೀಸರಿಗೆ ಅದೇ ದಿನ ತಿಳಿಸಿದ ವಿಚಾರ ನೆನಪಿಲ್ಲ. ಆದರೆ ಪೊಲೀಸರು ಅದೇ ದಿನ ಮನೆಗೆ ಬಂದಿದ್ದರು. ಪೊಲೀಸರು ಬಂದಾಗ ಆರೋಪಿತರೆಲ್ಲಾ ಹೋಗಿಯಾಗಿತ್ತು. ಪೊಲೀಸರು ಬಂದಾಗ ದೂರು ಪಡೆದ ಬಗ್ಗೆ ನೆನಪಿಲ್ಲ. ಪೊಲೀಸರು ಬಂದು ಅಲ್ಲಿ ಏನೆಲ್ಲಾ ಆಯಿತು ಎಂದು ಬರೆದುಕೊಂಡು ಹೋದ ಬಗ್ಗೆ ನನಗೆ ನೆನಪಿಲ್ಲ. ಪೊಲೀಸರು ಬಂದ ದಿನವೇ ನನ್ನನ್ನು ವಿಚಾರಣೆ ಮಾಡಿಲ್ಲ. ಆರೋಪಿ ಸಿದ್ದಿಕ್ ಮತ್ತು ಸಾದಿಕ್ ರವರನ್ನು ಗಲಾಟೆಗೂ ಪೂರ್ವವೇ ನಾನು ನೋಡಿದ್ದೇನೆ. ಆರೋಪಿತರು ಬಂದಿದ್ದ ವಾಹನದ ನೊಂದಣಿ ಸಂ. ಅವರು ಗಲಾಟೆ ಮಾಡಿದ ದಿನವೇ ನನಗೆ ಗೊತ್ತಾಗಿದೆ. ಆರೋಪಿತರು ಬಂದ ವಾಹನದ ಸಂ ಯನ್ನು ನಾನು ಚಾಸಾ-1 ರವರಿಗೆ ತಿಳಿಸಿಲ್ಲ ಅವರಿಗೆ ಗೊತ್ತಿತ್ತು. ದೂರು ಕೊಡಲು ನಾನು ಪೋ ಠಾಣೆಗೆ ಹೋಗಿದ್ದೆನು. ದೂರನ್ನು ನಾನು ಹೋಗಿ ನೋಡಿದ ಬಗ್ಗೆ ನೆನಪಿಲ್ಲ. ದೂರನ್ನು ಯಾರು ಬರೆದರು ಎಂದು ನೆನಪಿಲ್ಲ. ದೂರಿನಲ್ಲಿ ಗಾಜು ಪುಡಿಯಾದ ಬಗ್ಗೆ ಮತ್ತು ವಾಹನದ ಸಂಖ್ಯೆ ಬರೆದಿರುವ ಬಗ್ಗೆ ನೆನಪಿಲ್ಲ. ಪೊಲೀಸರಿಗೆ ದೂರು ಕೊಡಲು ಹೋದ ದಿನವೇ ನನ್ನನ್ನು ವಿಚಾರಣೆ ಮಾಡಿದ್ದಾರೆ. ಆ ದಿನ ಪೊಲೀಸರಿಗೆ ವಾಹನದ ಸಂ ಯನ್ನು ತಿಳಿಸಿದ ಬಗ್ಗೆ ನೆನಪಿಲ್ಲ.

ಪೊಲೀಸರು ನನ್ನ ಹೇಳಿಕೆಯನ್ನು ದಿ.9-1-2024 ರಂದು ಪಡೆದಿದ್ದಾರೆ. ನಾನು ಕೊಟ್ಟ ಹೇಳಿಕೆಯನ್ನು ನಾನು ಓದಿ ನೋಡಿಲ್ಲ. ಆದಕಾರಣ ಅದರಲ್ಲಿ ಏನೆಲ್ಲಾ ಬರೆದಿದೆ ಎಂದು ಗೊತ್ತಿಲ್ಲ. ನಾನು ಹೇಳುವಂತೆ ಆರೋಪಿತರು ನಮ್ಮ ಮನೆಗೆ ಬಂದಿಲ್ಲ ಮತ್ತು ನಮಗೆ ಹಲ್ಲೆ ಕೂಡಾ ಮಾಡಿಲ್ಲ ಆದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಣ್ಣ ಹೇಳಿರುವ ಸುಳ್ಳಿಗೆ

ಪೂರಕವಾಗಿ ನಾನು ಕೂಡಾ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮು ಮಾ-2 ನಮ್ಮ ಮನೆಯ ಕಿಟಕಿಯ ಗಾಜಿನ ಚೂರುಗಳೇ ಅಲ್ಲ ಎಂದರೆ ಸರಿಯಲ್ಲ. ಆರೋಪಿತರು ಕಬ್ಬಿಣದ ರಾಡನ್ನು ಮನೆಯಲ್ಲಿ ಬಿಸಾಡಿ ಹೋಗಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಮನೆಗೆ ಬಂದದ್ದೂ ಇಲ್ಲ ಹಾಗೂ ಕಬ್ಬಿಣದ ರಾಡನ್ನು ಮನೆಯಲ್ಲಿ ಬಿಸಾಡಿ ಹೋಗಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಬಂದ ದಿನ ಮನೆಯಲ್ಲಿ ಇದ್ದ ಕಬ್ಬಿಣದ ರಾಡು ಹಾಗೂ ಗಾಜುಗಳನ್ನು ತೋರಿಸಿದ್ದೇವೆ. ಆ ಸಮಯದಲ್ಲಿ ಪೊಲೀಸರು ಬರವಣಿಗೆ ಮಾಡಿ ಕಬ್ಬಿಣದ ರಾಡು ಹಾಗೂ ಗಾಜಿನ ಚೂರುಗಳನ್ನು ತೆಗೆದುಕೊಂಡು ಹೋದ ಬಗ್ಗೆ ನೆನಪಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲ ತಿಳಿಸಿರುವ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿಯೇ ಇಲ್ಲ ಹಾಗೂ ನಾನು ಅವರಿಗೆ ಹೇಳಿಕೆಯನ್ನು ಕೂಡಾ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ಇದೇ ಪ್ರಥಮವಾಗಿ ನಾನು 2 ಮತ್ತು 3 ನೇ ಆರೋಪಿತರನ್ನು ನ್ಯಾಯಾಲಯದಲ್ಲ ನೋಡುತ್ತಿದ್ದೇನೆಂದರೆ ಸುಳ್ಳು. ನಿಪಿ-3 ರಲ್ಲಿ ಕಾಣುವ ಕಾರನ್ನೂ ಕೂಡಾ ಇದೇ ಪ್ರಪ್ರಥಮವಾಗಿ ನಾನು ನೋಡುತ್ತಿದ್ದೇನೆ ಎಂದರೆ ಸುಳ್ಳು.

ದಿ.9-1-24 ರಂದು ನನ್ನ ಹೇಳಿಕೆಯನ್ನು ಸಂಪ್ಯ ಪೋ ಠಾಣೆಯಲ್ಲಿ ಪಡೆಯಲಾಯಿತು. ಆಗ ನಾನು ನನ್ನ ಅಣ್ಣಂದಿರು ಹೋಗಿದ್ದೆವು. ದಿ.9-1-24 ರಂದು ಪೋ ಠಾಣೆಗೆ ಹೋದ ನಮ್ಮ ಪೈಕಿ ಯಾರನ್ನು ಮೊದಲು ಪೊಲೀಸರು ವಿಚಾರಣೆ ಮಾಡಿದರು ಎಂದು ನೆನಪಿಲ್ಲ. ನಾನು ಪೊಲೀಸ್ ಠಾಣೆಗೆ ಹೋಗಿ ಹೇಳಿಕೆ ಕೊಡದಿದ್ದ ಕಾರಣ ನನಗೆ ಯಾವುದೂ ನೆನಪಿಲ್ಲ ಎಂದು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.

**CW : 3**

PW : 3